# ಯಾಜ್ಞವಲ್ಕ್ಯನ ವಿಜಯ

## (ಬೃಹದಾರಣ್ಯಕೋಪನಿಷತ್ತು - ೧)

ಸ್ವಾಮಿ ವೀರೇಶಾನಂದ

ಇದು ಬೃಹದಾರಣ್ಯಕೋಪನಿಷತ್ತಿನಲ್ಲಿ ಬರುವ ಕಥೆ. ಜನಕನು ವಿದೇಹ ರಾಜ್ಯದ ರಾಜನು. ಹೀಗಾಗಿ ಅವನನ್ನು ವೈದೇಹ ಎಂದು ಕರೆಯುತ್ತಿದ್ದರು. ವಿದೇಹ ರಾಜ್ಯದಲ್ಲಿ ಇರುವವನೇ ವೈದೇಹನು. ಅವನು ಒಂದು ಯಜ್ಞವನ್ನು ಮಾಡಿದನು. ಆ ಯಜ್ಞದ ಸಮಯದಲ್ಲಿ ಋತ್ವಿಕರಿಗೆ, ಬಂದ ಅತಿಥಿಗಳಿಗೆ ಬಹುವಾಗಿ ದಕ್ಷಿಣೆಯನ್ನು ನೀಡಿದನು. ಹೀಗಾಗಿ ಅದು ಅಶ್ವಮೇಧವೇ ಮೊದಲಾದ ಬಹಳ ದೊಡ್ಡ ಯಜ್ಞವೇ ಆಗಿರಬೇಕು. ಅಥವಾ ಹಿಂದಿನ ಕಾಲದಲ್ಲಿ ಬಹುದಕ್ಷಿಣ ಎಂಬ ಹೆಸರಿನ ಯಜ್ಞವು ಪ್ರಸಿದ್ಧವಾಗಿದ್ದಿರಬಹುದು.

ಆ ಯಜ್ಞಕ್ಕೆ ಕುರು ಮತ್ತು ಪಾಂಚಾಲ ದೇಶಗಳಿಗೆ ಸೇರಿದ ವಿದ್ವಾಂಸರು ಮತ್ತು ಶಾಸ್ತ್ರವೇತ್ತರಾದ ಬ್ರಾಹ್ಮಣರು ಆಮಂತ್ರಿತರಾಗಿದ್ದರು. ಇದಲ್ಲದೆ ಇನ್ನಿತರ ರಾಜ್ಯಗಳಿಂದಲೂ ವಿದ್ವಾಂಸರು ಬಂದು ಸೇರಿದ್ದರು. ವಿದ್ವಜ್ಜನರ ಸಮೂಹವನ್ನು ನೋಡಿದ ಜನಕ ರಾಜನಿಗೆ ಒಂದು ಯೋಚನೆ ಬಂದಿತು. ಇವರಲ್ಲಿ ಬ್ರಹ್ಮಿಷ್ಠನು ಯಾರು? ಇವರೆಲ್ಲರೂ ವೇದಗಳ ಅರ್ಥವನ್ನು ವ್ಯಾಖ್ಯಾನ ಮಾಡುವ ಸಾಮರ್ಥ್ಯವುಳ್ಳವರು. ಆದರೆ ಹೆಚ್ಚಿನ ಸಾಮರ್ಥ್ಯ ಉಳ್ಳವನು ಯಾರು? ಇದನ್ನು ಕಂಡುಕೊಳ್ಳಬೇಕು ಎಂಬ ಜಿಜ್ಞಾಸೆ ಅವನಿಗೆ ಉಂಟಾಯಿತು.

ಇದಲ್ಲದೆ ಅವನು ಕಿರಿಯ ವಯಸ್ಸಿನ ಸಾವಿರ ಗೋವುಗಳನ್ನು ಕಟ್ಟಿಹಾಕಿಸಿದನು. ಒಂದೊಂದು ಗೋವಿನ ಕೋಡುಗಳಲ್ಲಿ ಹತ್ತು ಹತ್ತು ಪಾದಗಳಷ್ಟು ಚಿನ್ನದ ನಾಣ್ಯಗಳನ್ನು ಸಿಕ್ಕಿಸಿದ್ದನು. ಅಂದರೆ ಒಂದೊಂದು ಕೋಡಿನಲ್ಲಿಯೂ ಐದೈದು ಪಾದಗಳು ಇದ್ದವು. ಪಾದವೆಂದರೆ ಒಂದು ಬಗೆಯ ಅಳತೆ.

ಜನಕನು ನೆರೆದಿದ್ದ ವಿದ್ವಾಂಸರನ್ನು ಕುರಿತು ಹೀಗೆ ಹೇಳಿದನು: ''ಪೂಜ್ಯರಾದ ಬ್ರಾಹ್ಮಣರೇ, ನಿಮ್ಮಲ್ಲಿ ಯಾರು ಬ್ರಹ್ಮಿಷ್ಠನೋ, ಅವನು ಈ ಗೋವುಗಳನ್ನು ಹೊಡೆದುಕೊಂಡು ಹೋಗಲಿ.'' ಆದರೆ ಅಲ್ಲಿ ನೆರೆದಿದ್ದ ಯಾವ ಬ್ರಾಹ್ಮಣನಿಗೂ ಗೋವುಗಳನ್ನು ಹೊಡೆದುಕೊಂಡು ಹೋಗುವ ಧೈರ್ಯ ಇರಲಿಲ್ಲ. ಇದನ್ನು ನೋಡಿದ ಯಾಜ್ಞವಲ್ಕ್ಯನು ತನ್ನ ಶಿಷ್ಯನಾದ ಒಬ್ಬ ಬ್ರಹ್ಮಚಾರಿಯನ್ನು ಕರೆದು ಹೀಗೆ ಹೇಳಿದನು: ''ಸೋಮ್ಯ, ಸಾಮಶ್ರವನೇ, ಈ ಗೋವುಗಳನ್ನು ನಮ್ಮ ಮನೆಯ ಕಡೆಗೆ ಹೊಡೆದುಕೊಂಡು ಹೋಗು.'' ಸಾಮಶ್ರವ ಎಂದರೆ ಸಾಮವೇದವನ್ನು ಶ್ರವಣ ಮಾಡುತ್ತಿರುವ ಬ್ರಹ್ಮಚಾರಿ ಎಂದರ್ಥ. ಯಾಜ್ಞವಲ್ಕ್ಯನು ತನ್ನ ಸ್ವಂತ ವೇದವಾದ ಯಜುರ್ವೇದವಲ್ಲದೆ, ಎಲ್ಲ ವೇದಗಳಲ್ಲಿಯೂ ನಿಷ್ಣಾತನಾಗಿದ್ದನು ಎಂಬುದು ಇದರಿಂದ ಗೊತ್ತಾಗುತ್ತದೆ. ಯಾಜ್ಞವಲ್ಕ್ಯನ ಆಣತಿಯಂತೆ ಶಿಷ್ಯನು ಗೋವುಗಳನ್ನು ತನ್ನ ಆಚಾರ್ಯರ ಮನೆಗೆ ಹೊಡೆದುಕೊಂಡು ಹೋದನು.

ಯಾಜ್ಞವಲ್ಕ್ಯನು ಹೀಗೆ ಬ್ರಹ್ಮಿಷ್ಠನಿಗಾಗಿ ಇಟ್ಟಿರುವ ಗೋವುಗಳನ್ನು ತನ್ನದಾಗಿಸಿಕೊಂಡನು. ಅಂದರೆ ನೆರೆದಿದ್ದ ಬ್ರಾಹ್ಮಣರಲ್ಲಿ ತಾನೇ ಬ್ರಹ್ಮಿಷ್ಠನೆಂದು ಅವನು ಘೋಷಿಸಿದಂತೆ ಆಯಿತು. ಯಾಜ್ಞವಲ್ಕ್ಯನ ಈ ಧಾರ್ಷ್ಟ್ಯವನ್ನು ಕಂಡು ಇತರ ಬ್ರಾಹ್ಮಣರು ಬಹಳ ಕ್ರುದ್ಧರಾದರು. ಅವರಲ್ಲಿ ಅಶ್ವಲನೆಂಬ ಬ್ರಾಹ್ಮಣನು ಇದ್ದನು. ಅವನು ಜನಕನ ಪುರೋಹಿತನಾಗಿದ್ದನು. ಅವನು ಎದ್ದು ನಿಂತು ಯಾಜ್ಞವಲ್ಕ್ಯನಿಗೆ ಸವಾಲು ಹಾಕಿದನು. ''ನೀನೇ ತಾನೇ, ಯಾಜ್ಞವಲ್ಕ್ಯ ಎನ್ನುವವನು? ನಮ್ಮೆಲ್ಲರಲ್ಲಿ ಬ್ರಹ್ಮಿಷ್ಠನಾಗಿರುವವನು ನೀನೇ ಏನು?'' ಅಶ್ವಲನ ಈ ಅಣಕದ ಮಾತುಗಳನ್ನು ಕೇಳಿಸಿಕೊಂಡ ಯಾಜ್ಞವಲ್ಕ್ಯನು ಕೋಪಗೊಳ್ಳಲಿಲ್ಲ. ಇದಕ್ಕೆ ಬದಲಾಗಿ ಇಡೀ ಬ್ರಾಹ್ಮಣಸಮುದಾಯಕ್ಕೆ ವಿನಯದಿಂದಲೇ ಹೇಳಿದನು: ''ನಾವು ಬ್ರಹ್ಮಿಷ್ಠನಿಗೆ ನಮಸ್ಕಾರವನ್ನು ಮಾಡುತ್ತೇವೆ. ಹೌದು. ನೀವು ಹೇಳುವುದು ಸರಿ. ನಾವು ಗೋಕಾಮರು. ಗೋವುಗಳನ್ನು ನಾವು ಬಯಸುತ್ತೇವೆ.'' ಇದನ್ನು ಕೇಳಿಸಿಕೊಂಡ ಅಶ್ವಲನು ಯಾಜ್ಞವಲ್ಕ್ಯನನ್ನು ಪ್ರಶ್ನಿಸುವುದಕ್ಕೆ ನಿಶ್ಚಯಿಸಿದನು.

ಅಶ್ವಲನ ಪ್ರಶ್ನೆ ಹೀಗಿತ್ತು: ''ಯಾಜ್ಞವಲ್ಕ್ಯ, ಎಲ್ಲವೂ ಮೃತ್ಯುವಿನಿಂದ ವ್ಯಾಪ್ತವಾಗಿದೆ. ಅಷ್ಟೇ ಅಲ್ಲ, ಎಲ್ಲವೂ ಮೃತ್ಯುವಿನ ವಶಕ್ಕೆ ಒಳಪಟ್ಟಿದೆ. ಯಾವ ಸಾಧನದಿಂದ, ಯಾವ ಉಪಾಸನೆಯಿಂದ ಮೃತ್ಯುವಿನ ಆಚೆಗೆ ನಾವು ಹೋಗಬಹುದು? ಹೇಗೆ ಮೃತ್ಯುವಿಗೆ ವಶನಾಗದೆ ಸ್ವತಂತ್ರನಾಗಿ ಇರಬಹುದು?'' ಯಾಜ್ಞವಲ್ಕ್ಯನು ಇದಕ್ಕೆ ಪೂರಕವಾದ ಉಪಾಸನಾ ಪದ್ಧತಿಯನ್ನು ಬೋಧಿಸಿದನು. ಇದರಿಂದ ತೃಪ್ತನಾದ ಅಶ್ವಲನು ವಾದದಿಂದ ಹಿಂತೆಗೆದನು.

ತದನಂತರ ಜಾರತ್ಕಾರ ಆರ್ತಭಾಗನು ಕೇಳಿದನು: ''ಯಾಜ್ಞವಲ್ಕ್ಯನೇ, ಗ್ರಹಗಳು ಯಾವುದು? ಅತಿಗ್ರಹಗಳು ಎಷ್ಟು?'' ಎಂದು. ಅಲ್ಲದೆ ಇನ್ನೂ ಹಲವು ಪ್ರಶ್ನೆಗಳನ್ನು ಕೇಳಿದನು. ಅವೆಲ್ಲಕ್ಕೂ ಯಾಜ್ಞವಲ್ಕ್ಯನು ಸಮರ್ಥವಾಗಿ ಉತ್ತರಿಸಿದನು.

ಇದೇ ರೀತಿ ಮುಂದುವರೆದು, ಭುಜ್ಯು ಲಾಹ್ಯಾಯನಿಯು ಕೂಡ ಹಲವಾರು ಪ್ರಶ್ನೆಗಳನ್ನು ಕೇಳಿದನು. ಅದಕ್ಕೂ ಯಾಜ್ಞವಲ್ಕ್ಯನು ಸಮಂಜಸವಾದ ಉತ್ತರಗಳನ್ನು ನೀಡಿದನು.




## ಉಷಸ್ತನ ಪ್ರಶ್ನೆ

ಈ ಮೂರು ವಿದ್ವಾಂಸರನ್ನು ವಿವಾದದಲ್ಲಿ ಸೋಲಿಸಿದ ಮೇಲೆ, ಉಷಸ್ತ ಚಾಕ್ರಾಯಣ ಎನ್ನುವವನು ಎದ್ದುನಿಂತನು. ಅವನ ಜೊತೆಗೆ ನಡೆದ ಸಂಭಾಷಣೆಯು ನಮಗೆ ಉಪಯುಕ್ತ ವಾಗಿದೆ. ಅದನ್ನು ವಿಶದವಾಗಿ ನೋಡೋಣ.

ಉಷಸ್ತ ಚಾಕ್ರಾಯಣನು ಹೀಗೆ ಕೇಳಿದನು: ''ಯಾಜ್ಞ ವಲ್ಕ್ಯ, ನೀನು ಎಲ್ಲವನ್ನೂ ತಿಳಿದವನು ಎಂದು ಹೇಳಿಕೊಳ್ಳು ತ್ತೀಯೆ. ಯಾವುದು ಸಾಕ್ಷಾತ್ತಾಗಿರುವುದೋ, ಯಾವುದು ಅಪ ರೋಕ್ಷವೋ, ಯಾವನು ಸರ್ವಾಂತರನಾದ ಆತ್ಮನೋ – ಅವನನ್ನು ನನಗೆ ತೋರಿಸಿ ಹೇಳು?'' ಸಾಕ್ಷಾತ್ತಾಗಿರುವುದು ಎಂದರೆ ನೋಡುವವನಿಂದ ಯಾವ ರೀತಿಯಲ್ಲಿಯೂ ದೂರದಲ್ಲಿ ಇರದ ಎಂದರ್ಥ. ಅಪರೋಕ್ಷವಾಗಿರುವುದು ಎಂದರೆ ನೇರ ವಾಗಿ, ಯಾವುದೇ ಮಾಧ್ಯಮಗಳ ಮೂಲಕವಲ್ಲದೆ ಅನುಭವಕ್ಕೆ ಬರುವಂಥದ್ದು ಎಂದರ್ಥ. ನಮ್ಮ ಅನುಭವದಲ್ಲಿ , ಎಲ್ಲವೂ ಮನಸ್ಸು ಮತ್ತು ಇಂದ್ರಿಯಗಳ ಮೂಲಕವೇ ಅನುಭವಕ್ಕೆ ಬರುತ್ತದೆ. ಇಂಥ ಅನುಭವ ಪರೋಕ್ಷ ಅನುಭವ. ಬ್ರಹ್ಮವು ನಮ್ಮ ಆತ್ಮವೇ ಎಂಬುದು ಮಾತ್ರವೇ ಅಪರೋಕ್ಷ ಅನುಭವ.

ಇದಕ್ಕೆ ಯಾಜ್ಞವಲ್ಕ್ಯನು ಹೇಳಿದನು: ''ಅವನು ಬೇರೆ ಯಾರೂ ಅಲ್ಲ. ಅವನು ನಿನ್ನ ಆತ್ಮವೇ ಆಗಿದ್ದಾನೆ. ಅವನು ನಿನ್ನ ಆತ್ಮವು. ಅವನು ಸರ್ವಾಂತರನು (ಎಲ್ಲರಲ್ಲಿಯೂ ಅಂತರ್ಗತ ನಾಗಿರುವವನು).''

ಉಷಸ್ತಚಾಕ್ರಾಯಣ: ''ಯಾಜ್ಞವಲ್ಕ್ಯನೇ, ಸರ್ವಾಂತರ ನೆಂದರೆ ಯಾರು?''

ಯಾಜ್ಞವಲ್ಕ್ಯ: ''ಇವನು ಪ್ರಾಣದ ಮೂಲಕ ಉಸಿರಾಡು ವನು. ಅವನೇ ಸರ್ವಾಂತರನಾದ ನಿನ್ನ ಆತ್ಮನು. ಹೀಗೆಯೇ ಅಪಾನ ವಾಯುವಿನ ಮೂಲಕ ಅಪಾನಕ್ರಿಯೆಯನ್ನು ಕೈಗೊಳ್ಳು ವನು. ಅವನೇ ಸರ್ವಾಂತರನಾದ ನಿನ್ನ ಆತ್ಮನು. ವ್ಯಾನವಾಯು ವಿನಿಂದ ವ್ಯಾನಕ್ರಿಯೆಯನ್ನು ಮಾಡುತ್ತಿರುವ ಅವನೇ ಸರ್ವಾಂ ತರನಾದ ನಿನ್ನ ಆತ್ಮನು. ಹಾಗೆಯೇ ಉದಾನದಿಂದ ಉದಾನ ಕ್ರಿಯೆಯನ್ನು ಮಾಡುತ್ತಿರುವವನೇ, ಸರ್ವಾಂತರನಾದ ನಿನ್ನ ಆತ್ಮನು.''

ಇದಕ್ಕೆ ಉಷಸ್ತ ಚಾಕ್ರಾಯಣನು ಹೀಗೆಂದನು: ''ಯಾಜ್ಞ ವಲ್ಕ್ಯ, ಒಂದು ಎತ್ತು ಅಥವಾ ಕುದುರೆಯ ಬಗ್ಗೆ ಕೇಳಿದಾಗ, ಯಾವುದು ನಡೆಯುತ್ತಿರುವುದೋ ಅದೇ ಎತ್ತು; ಯಾವುದು ಓಡುತ್ತಿರುವುದೋ ಅದೇ ಕುದುರೆ ಎಂದು ಹೇಳಿದರೆ ಹೇಗಿರು ತ್ತದೆ? ಹಾಗೆಯೇ ನಿನ್ನ ಉತ್ತರವೂ ಇದೆ. ನನಗೆ ಇಂಥ ವ್ಯಾಖ್ಯಾನ ಬೇಕಾಗಿಲ್ಲ. ನನ್ನ ಪ್ರಶ್ನೆ ನೇರವಾದುದು. ಯಾವುದು ಸಾಕ್ಷಾತ್ತಾಗಿರುವುದೋ, ಅಪರೋಕ್ಷ ಬ್ರಹ್ಮವೋ, ಯಾವನು ಸರ್ವಾಂತರವಾದ ಆತ್ಮನೋ – ಅವನನ್ನೇ ನನಗೆ ವಿಸ್ತರಿಸಿ ಹೇಳು.''

ಯಾಜ್ಞವಲ್ಕ್ಯನು ತಾನು ಹೇಳಿದ್ದನ್ನೇ ಪುನರುಚ್ಚರಿಸಿದನು: ''ಇವನೇ ಸರ್ವಾಂತರನಾದ ನಿನ್ನ ಆತ್ಮನು.''

ಉಷಸ್ತಚಾಕ್ರಾಯಣ : ''ಆ ಸರ್ವಾಂತರನು ಯಾರು?''

ಯಾಜ್ಞವಲ್ಕ್ಯನು ವಿವರಿಸುತ್ತಾನೆ: ''ಅಯ್ಯಾ, ಆತ್ಮವನ್ನು ಬೇರೆ ವಸ್ತುಗಳ ಹಾಗೆ ವಿಷಯೀಕರಿಸಿ ಹೇಳುವುದಕ್ಕೆ ಆಗುವು ದಿಲ್ಲ. ಇದು ಅಶಕ್ಯವಾದುದು. ಏಕೆಂದರೆ, ವಸ್ತುವಿನ ಸ್ವಭಾವವೇ ಹಾಗಿದೆ. ಆತ್ಮವಸ್ತುವಿನ ಸ್ವಭಾವ ಏನೆಂದು ಕೇಳುವೆಯೇನು? ಅದು ನೋಡುವಿಕೆಯನ್ನೂ ನೋಡುವ ಸ್ವಭಾವ ಉಳ್ಳದ್ದು. ಇದನ್ನೇ ದೃಷ್ಟಿಗೂ ದ್ರಷ್ಟಾ ಎಂದು ಹೇಳುವರು. ದೃಷ್ಟಿ ಎಂದರೆ ಲೌಕಿಕ ದೃಷ್ಟಿ. ಘಟವನ್ನು ನೋಡುವುದು, ಬಟ್ಟೆಯನ್ನು ನೋಡು ವುದು ಮುಂತಾದವು ಲೌಕಿಕ ದೃಷ್ಟಿಗಳು. ಇವು ಅಶಾಶ್ವತ ವಾದುವು. ಆದಿ ಮತ್ತು ಅಂತ್ಯಗಳುಳ್ಳದ್ದು.

''ಈ ಲೌಕಿಕ ದೃಷ್ಟಿಗೆ ಆಧಾರಭೂತವಾದದ್ದು ದ್ರಷ್ಟೃ ಅಂದರೆ ಪಾರಮಾರ್ಥಿಕ ದೃಷ್ಟಿ. ಆತ್ಮಸ್ವರೂಪವೇ ಆ ಪಾರಮಾರ್ಥಿಕ ದೃಷ್ಟಿ. ಆತ್ಮಚೈತನ್ಯವೇ ಪಾರಮಾರ್ಥಿಕ ದೃಷ್ಟಿ. ಅದು ಎಲ್ಲ ಲೌಕಿಕ ದೃಷ್ಟಿಗಳ ಆಧಾರಭೂತವಾಗಿದೆ. ಹಾಗೂ ಇದು ಎಂದಿಗೂ ಇರು ತ್ತದೆ. ಇದು ಲುಪ್ತವಾಗುವುದೇ ಇಲ್ಲ. ಲೌಕಿಕದೃಷ್ಟಿಯು ಪಾರ ಮಾರ್ಥಿಕ ದೃಷ್ಟಿ ಅಥವಾ ಆತ್ಮಚೈತನ್ಯದ ಛಾಯೆ ಮಾತ್ರ. ನಿಜವಾಗಿ ಇರುವುದು ಆತ್ಮದೃಷ್ಟಿ ಅಥವಾ ಪಾರಮಾರ್ಥಿಕ ದೃಷ್ಟಿ ಮಾತ್ರವೇ. ಈ ಆತ್ಮಚೈತನ್ಯವು ಚಿರಂತನವಾದುದು; ಆದಿಅಂತ್ಯ ಗಳಿಲ್ಲದ್ದು. ಈ ಆತ್ಮಚೈತನ್ಯವನ್ನು ಸಾಧಾರಣ ವಸ್ತುಗಳ ರೀತಿ ಯಲ್ಲಿ ನೋಡಲಾಗುವುದಿಲ್ಲ. ಏಕೆಂದರೆ ಅದು ದೃಷ್ಟಿಯ ದೃಷ್ಟಿ ಯಾಗಿದೆ; ಕೇಳುವುದರ ಕೇಳುವಿಕೆಯಾಗಿದೆ; ಮನಸ್ಸಿನ ಚಿಂತನಾ ಶಕ್ತಿಯಾಗಿದೆ; ಬುದ್ಧಿಯ ಅರಿಯುವ ಸಾಮರ್ಥ್ಯವಾಗಿದೆ.''

ಯಾಜ್ಞವಲ್ಕ್ಯನು ಮುಂದುವರಿದು ಹೇಳುತ್ತಾನೆ: ''ಈ ಚೈತನ್ಯವೇ ನಿನ್ನ ಸರ್ವಾಂತರ ಆತ್ಮನು. ಈ ಆತ್ಮಸ್ಥಿತಿಗಿಂತ ಭಿನ್ನ ವಾದದ್ದು ವಿನಾಶಿಯು, ಅಂದರೆ ವಿನಾಶವುಳ್ಳದ್ದು. ಆತ್ಮಚೈತನ್ಯ ವೊಂದೇ ವಿನಾಶವಿಲ್ಲದ್ದು; ಕೂಟಸ್ಥವಾದದ್ದು.''

ಈ ಉತ್ತರವನ್ನು ಕೇಳಿದ ಉಷಸ್ತಚಾಕ್ರಾಯಣನು ಸುಮ್ಮ ನಾದನು.

## ಕಹೋಲನ ಪ್ರಶ್ನೆ

ಈಗ ಕಹೋಲ ಕೌಷೀತಕೇಯ ಎಂಬ ವಿದ್ವಾಂಸನು ಎದ್ದು ನಿಂತು ಯಾಜ್ಞವಲ್ಕ್ಯನಿಗೆ ಸವಾಲು ಹಾಕಿದನು. ಆಸಕ್ತಿಕರವಾದ ವಿಷಯವೆಂದರೆ, ಹಿಂದೆ ಉಷಸ್ತನು ಕೇಳಿದ ಪ್ರಶ್ನೆಯನ್ನೇ ಅವನು ಪುನರುಚ್ಚರಿಸುತ್ತಾನೆ:

''ಯಾಜ್ಞವಲ್ಕ್ಯನೇ, ಯಾವುದು ಸಾಕ್ಷಾತ್ತಾಗಿರುವುದೋ, ಅಪರೋಕ್ಷವಾಗಿರುವ ಬ್ರಹ್ಮವೋ, ಯಾವುದು ಸರ್ವಾಂತರವಾದ ಆತ್ಮವೋ – ಅವನನ್ನು ನನಗೆ ವಿವರಿಸಿ ಹೇಳು.''

ಯಾಜ್ಞವಲ್ಕ್ಯ: ''ಇವನೇ ನಿನ್ನ ಸರ್ವಾಂತರವಾದ ಆತ್ಮನು.''

ಕಹೋಲ: ''ಯಾಜ್ಞವಲ್ಕ್ಯನೇ, ಸರ್ವಾಂತರ ಎಂದೆಯಲ್ಲ, ಅವನು ಯಾವನು?''

ಯಾಜ್ಞವಲ್ಕ್ಯನು ಸರ್ವಾಂತರ ಎಂಬ ಅಂಶವನ್ನು ಈಗ ವಿವರಿಸಿ ಹೇಳುತ್ತಾನೆ: ''ಯಾವನು ಹಸಿವೆ ಮತ್ತು ಬಾಯಾರಿಕೆಗಳನ್ನು, ಶೋಕ ಮತ್ತು ಮೋಹಗಳನ್ನು, ವೃದ್ಧಾಪ್ಯ ಮತ್ತು ಮೃತ್ಯುವನ್ನು ಮೀರಿಹೋಗಿರುವನೋ, ಅವನೇ ಸರ್ವಾಂತರ ಆತ್ಮನು.''

ಈಗ ಸಂನ್ಯಾಸ ಧರ್ಮದ ಬಗ್ಗೆ ಬಹಳ ಮುಖ್ಯವಾದ ಉಪದೇಶವನ್ನು ಯಾಜ್ಞವಲ್ಕ್ಯನು ನೀಡುತ್ತಾನೆ:

''ನಾನು ಹಸಿವೆ–ಬಾಯಾರಿಕೆ ಮುಂತಾದ ಸಂಸಾರಧರ್ಮಗಳಿಂದ ಮುಕ್ತವಾಗಿರುವ ನಿತ್ಯತೃಪ್ತವಾದ ಪರಬ್ರಹ್ಮವೇ ಎಂದೆಂದಿಗೂ ಆಗಿದ್ದೇನೆ ಎಂದು ನೇರವಾಗಿ ತಿಳಿದುಕೊಂಡ ಬ್ರಹ್ಮವೇತ್ತರು ಮುಂದೆ ಏನು ಮಾಡುತ್ತಾರೆ?

''ಈ ಬ್ರಹ್ಮವೇತ್ತರು ಪುತ್ರೈಷಣ, ವಿತ್ತೈಷಣ, ಲೋಕೈಷಣ – ಮುಂತಾದ ಮೂರು ಮೂಲಭೂತ ಬಯಕೆಗಳಿಂದ ಎದ್ದುನಿಲ್ಲುತ್ತಾರೆ, ಅಂದರೆ ತ್ಯಾಗಮಾಡುತ್ತಾರೆ. ಇದನ್ನೇ ಏಷಣಾತ್ರಯ ಎಂದು ಕರೆಯುತ್ತಾರೆ. ಅವುಗಳ ವಿವರಣೆ ಹೀಗಿದೆ: ಪುತ್ರೈಷಣ – ಪುತ್ರನ ಕುರಿತಾದ ಆಸೆ; ವಿತ್ತೈಷಣ – ಕರ್ಮಕ್ಕೆ ಸಾಧನವಾದ (ಇವುಗಳ ಮೂಲಕ ಕರ್ಮವನ್ನು ಮಾಡಿ ಪಿತೃಲೋಕ ಮುಂತಾದ ಲೋಕಗಳನ್ನು ಗೆದ್ದುಕೊಳ್ಳುತ್ತೇನೆ ಎಂದು ಸಾಧಕನು ಸಂಕಲ್ಪಿಸುತ್ತಾನೆ) ಗೋವು ಮುಂತಾದವುಗಳನ್ನು ಕುರಿತಾದ ಆಸೆ; ಲೋಕೈಷಣ — ಕೇವಲ ಕರ್ಮವನ್ನು ಮಾಡಿ ಪಿತೃಲೋಕವನ್ನಾಗಲಿ, ಕರ್ಮ ಮತ್ತು ಉಪಾಸನೆಗಳನ್ನು ಸೇರಿಸಿಕೊಂಡು ದೇವಲೋಕವನ್ನಾಗಲಿ ಗೆದ್ದುಕೊಳ್ಳುವ ಆಸೆ. ದೇವಲೋಕಗಳಲ್ಲಿ ಅತ್ಯಂತ ಉನ್ನತವಾದುದು ಹಿರಣ್ಯಗರ್ಭಲೋಕ ಅಥವಾ ಪ್ರಜಾಪತಿಲೋಕ. ಈ ಏಷಣಾತ್ರಯಗಳನ್ನು ಮೀರಿಹೋಗುವುದೇ ಸಂನ್ಯಾಸ ಎನ್ನಿಸಿಕೊಳ್ಳುತ್ತದೆ.

''ಆದ್ದರಿಂದಲೇ ಹಿಂದಿನಕಾಲದ ಬ್ರಹ್ಮಜ್ಞಾನಿಗಳು ಎಲ್ಲ ಕರ್ಮಗಳನ್ನೂ, ಅದರ ಸಾಧನಗಳನ್ನೂ ತ್ಯಾಗಮಾಡಿ, ಪುತ್ರೈಷಣೆಯಿಂದಲೂ, ವಿತ್ತೈಷಣೆಯಿಂದಲೂ, ಲೋಕೈಷಣೆಯಿಂದಲೂ ಎದ್ದುನಿಂತು, ಅಂದರೆ ತ್ಯಾಗಮಾಡಿ, ಭಿಕ್ಷಾಚರ್ಯೆಯನ್ನು ಕೈಗೊಳ್ಳುತ್ತಿದ್ದರು. ಇದನ್ನೇ ವಿದ್ವತ್ ಸಂನ್ಯಾಸ ಎನ್ನುವುದು. ಆತ್ಮಜ್ಞಾನದ ನಂತರ ನೈಸರ್ಗಿಕವಾಗಿ ಬರುವ ಸಂನ್ಯಾಸವೇ ವಿದ್ವತ್ ಸಂನ್ಯಾಸ. ಪರಮಹಂಸಪಾರಿವ್ರಾಜ್ಯವಾದ ಸಂನ್ಯಾಸವೇ ಆತ್ಮಜ್ಞಾನಿಯು ಮಾಡಬೇಕಾದ ಕಾರ್ಯ.''

ಅನಂತರ ಯಾಜ್ಞವಲ್ಕ್ಯನು ಒಂದು ಮನೋವೈಜ್ಞಾನಿಕ ತಥ್ಯವನ್ನು ಹೇಳುತ್ತಾನೆ. ಯಾವುದು ಪುತ್ರೈಷಣೆಯೋ, ಅದೇ ವಿತ್ತೈಷಣೆ. ಯಾವುದು ವಿತ್ತೈಷಣೆಯೋ ಅದೇ ಲೋಕೈಷಣೆ. ಪುತ್ರನಿಗಾಗಿ ಆಸೆಪಡುವುದು, ವಿತ್ತಕ್ಕಾಗಿ ಆಸೆಪಡುವುದು – ಇವೆರಡೂ ಆಸೆಯೇ ಆಗಿದೆ. ಏಕೆಂದರೆ ಇವೆಲ್ಲವೂ ಯಾವುದಾದರೂ ಲೋಕವನ್ನು ಗೆದ್ದುಕೊಳ್ಳುವ ಆಸೆಯಲ್ಲಿಯೇ ಪರ್ಯವಸನವಾಗುತ್ತದೆ. ಕಡೆಯಲ್ಲಿ ಎಲ್ಲವೂ ಆಸೆಯೇ ಆಗಿದೆ.

ಇಲ್ಲಿ ಇನ್ನೊಂದು ವಿಷಯವಿದೆ. ಸಾಧನ ಮತ್ತು ಸಾಧ್ಯ ಎಂಬ ಎರಡು ಅಂಶಗಳಿವೆ. ಪುತ್ರ, ಯಜ್ಞಯಾಗಾದಿಗಳನ್ನು ಮಾಡಲು ಬೇಕಾದ ಧನ, ಯಜ್ಞಯಾಗಾದಿಗಳು — ಇವೆಲ್ಲವೂ ಸಾಧನಗಳು. ಉನ್ನತವಾದ ಲೋಕವನ್ನು ಪಡೆದುಕೊಳ್ಳುವುದೇ ಸಾಧ್ಯ. ಸಾಧನಕ್ಕಾಗಿನ ಆಸೆಯೇ ಸಾಧ್ಯಕ್ಕಾಗಿನ ಆಸೆ. ಸಾಧ್ಯಕ್ಕಾಗಿನ ಆಸೆಯೇ ಸಾಧನಕ್ಕಾಗಿನ ಆಸೆ. ಹೀಗೆ ಇಡೀ ಜಗತ್ತು ಏಷಣಾ ಅಥವಾ ಆಸೆಯ ಮೇಲೆಯೇ ನಿಂತಿದೆ. ಅದನ್ನು ತ್ಯಾಗ ಮಾಡುವುದೇ ನಿಜವಾದ ಸಂನ್ಯಾಸ.

ಹೀಗಾಗಿ ಆತ್ಮಜ್ಞಾನವನ್ನು ಪಡೆದುಕೊಂಡವನು, ಅದರಲ್ಲಿ ಪರಿಪೂರ್ಣತೆಯನ್ನು ಪಡೆದುಕೊಂಡು, ಅದರ ಬಲದಿಂದಲೇ ಬಾಳುವೆಯನ್ನು ನಡೆಸಬೇಕು. ಏಷಣಾತ್ರಯ ತ್ಯಾಗವೇ ಅಂಥ ಜೀವನ. ಇಂಥ ಆತ್ಮಬಲ ಮತ್ತು ಆತ್ಮಜ್ಞಾನ — ಇವುಗಳಲ್ಲಿ ಪರಿಪೂರ್ಣತೆಯನ್ನು ಪಡೆದುಕೊಂಡು ಧ್ಯಾನಜೀವನವನ್ನು ನಡೆಸಬೇಕು. ಧ್ಯಾನವು ಪರಿಪೂರ್ಣವಾಗಿ ಸಾಕ್ಷಾತ್ಕಾರದಲ್ಲಿ ಸಂಪನ್ನವಾಗಬೇಕು. ಆತ್ಮಜ್ಞಾನವು ಅನುಭವದಲ್ಲಿ ಕೊನೆಗೊಳ್ಳಬೇಕು.

ಕಡೆಯದಾಗಿ ಯಾಜ್ಞವಲ್ಕ್ಯನು ಬ್ರಹ್ಮಜ್ಞಾನಿಯ ಲಕ್ಷಣವನ್ನು ವಿಶ್ಲೇಷಿಸುತ್ತಾನೆ. ಯಾವುದೇ ಬಾಹ್ಯಲಕ್ಷಣಗಳಿಂದ ಒಬ್ಬನು ಸಂನ್ಯಾಸಿಯಾಗುವುದಿಲ್ಲ. ಕಾಷಾಯಧಾರಣೆ, ವಿಭೂತಿ ಧಾರಣೆ, ಕರ್ಮತ್ಯಾಗ — ಇವುಗಳಿಂದ ಒಬ್ಬನು ನಿಜವಾದ ಸಂನ್ಯಾಸಿಯಾಗುವುದಿಲ್ಲ. ನೈಜ ಸಂನ್ಯಾಸ ಇರುವುದು ಆತ್ಮಜ್ಞಾನದ ಬೆಳಕಿನಲ್ಲಿ ಮಾತ್ರವೇ. ಇಂಥ ಆತ್ಮಜ್ಞಾನದ ಬೆಳಕು ಅಂತರಂಗದಲ್ಲಿ ಬೆಳಗುತ್ತಿರುವಾಗ ಮಾತ್ರ, ಒಬ್ಬನು ನೈಜ ಸಂನ್ಯಾಸಿಯಾಗುತ್ತಾನೆ. ಬಾಹ್ಯ ಚಿಹ್ನೆಗಳು ಒಬ್ಬನನ್ನು ಸಂನ್ಯಾಸಿಯನ್ನಾಗಿ ಮಾಡುವುದಿಲ್ಲ. ಇಂಥ ಆತ್ಮಜ್ಞಾನಕ್ಕೂ ಆತ್ಮಜ್ಞಾನಿಗೂ ಯಾವುದೇ ವ್ಯತ್ಯಾಸವಿಲ್ಲ. ಇದೇ ಆತ್ಮಸ್ಥಿತಿ. ಇದೇ ಆತ್ಮ. ಇದಕ್ಕಿಂತ ಭಿನ್ನವಾದುದೆಲ್ಲವೂ ವಿನಾಶವುಳ್ಳದ್ದು. ಆತ್ಮವೊಂದೇ ಅವಿನಾಶಿಯಾಗಿ, ಎಂದೆಂದಿಗೂ ಇರುವಂಥದ್ದು.

ಯಾಜ್ಞವಲ್ಕ್ಯನ ಈ ವಿಸ್ತೃತ ವಿವರಣೆಯನ್ನು ಕೇಳಿದ ಕಹೋಲ ಕೌಷೀತಕೇಯನು ವಾದದಿಂದ ಹಿಂಜರಿದನು.